**OS- 383/2017 ಡಿಡಬ್ಲ್ಯೂ-1**

ದಿನಾಂಕಃ04.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು ಃ ವಾದಿಯ ಪರವಾಗಿ ಶ್ರೀ ಎ ಆರ್ ಕೆ ವಕೀಲರಿಂದ ಃ-</u>

ವಾದಿ ಈ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇನೆ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರು ನೀಡಿರುತ್ತಾರೆ. ನಮ್ಮ ತಂದೆಯವರು ಬಿಳಿಕಲ್ಲ ಬೆಟ್ಟದಲ್ಲಿ ಕೆಲಸದಲ್ಲಿದ್ದು ಆ ಸಮಯದಲ್ಲಿ ನಾನು ಮತ್ತು ನನ್ನ ತಂದೆಯವರು ವಾಸವಾಗಿದ್ದೇವು. ನಂತರ ನಾನು ಮತ್ತು ನನ್ನ ತಂದೆಯವರು ಭದ್ರಾವತಿ ತಾಲ್ಲೂಕಿನ ಲ್ಲಿ ವಾಸವಾಗಿದ್ದೇವೆ. ಬಿಳಿಕಲ್ಲ ಬೆಟ್ಟದಲ್ಲಿರುವ ರಂಗನಾಥಪುರದಲ್ಲಿ ನಾನು ಶಿವಕುಮಾರ್ ರವರ ಜೊತೆ ವಿವಾಹ ಮಾಡಿಕೊಂಡಿದ್ದು, ಅಲ್ಲೆ ವಾಸವಾಗಿದ್ದೆ, ಈಗಲೂ ಸಹ ನಾನು ರಂಗನಾಥಪುರದಲ್ಲಿ ವಾಸವಾಗಿದ್ದೇನೆಂದರೆ ಸರಿ. ವಾದಿಯು ಬಾವಿಕೆರೆ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ವಾದಿಯ ಗಂಡನ ಹೆಸರು ಬೋರೆಗೌಡ, ಸದರಿಯವರು ಬಾವಿಕೆರೆ ವಾಸಿ ಎಂದರೆ ಸರಿಯಲ್ಲ. ವಾದಿ ಬಾವಿಕೆರೆಯ ಖಾಯಂ ವಾಸಿ ಆಗಿದ್ದರೂ ಸಹ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವ ಸ್ವತ್ತಿನಲ್ಲಿ ಸುಮಾರು 20-25 ವರ್ಷಗಳಿಂದ ಗುಡಿಸಲು ನಿರ್ಮಾಣ ಮಾಡಿಕೊಂಡು ಅಲ್ಲೆ ವಾಸವಾಗಿದ್ದಾರೆಂದರೆ ಸರಿಯಲ್ಲ. ಇತ್ತೀಚೆಗೆ ಮಳೆ ಗಾಳಿಯಿಂದ ಬಿದ್ದು ಹೋದ ಕಾರಣ ವಾದಿಯು ಬೇರೆ ಕಡೆ ವಾಸವಾಗಿದ್ದಾರೆಂದರೆ ಸರಿಯಲ್ಲ. ದಾವ ಆಸ್ತಿಯು ಸರ್ಕಾರದ ಜಾಗ ಎಂದರೆ ಸರಿ. ದಾವ ಆಸ್ತಿಯನ್ನು ಸರ್ಕಾರದವರು ವಾದಿಯ ಸ್ವಾಧೀನತೆಯನ್ನು ಗಮದಿನಿಸಿ ಅವರ ಹೆಸರಿಗೆ 28-02-2017 ರಂದು ಸರ್ಕಾರದವರು ಮಂಜೂರು ಮಾಡಿದ್ದಾರೆಂದರೆ ಸರಿಯಲ್ಲ. ಸರ್ಕಾರದ ಆದೇಶದ ಪ್ರಕಾರ ದಿಃ 05-03-2017 ರಂದು ತರೀಕೆರೆ ತಹಶೀಲದ್ದಾರ್ ರವರು ವಾದಿ ಹೆಸರಿಗೆ ದಾವ ಸ್ವತ್ತಿಗೆ ಸಂಬಧಪಟ್ಟಂತೆ ಒಂದು ಹಕ್ಕು ಪತ್ರ ನೀಡಿದ್ದಾರೆಂದರೆ ಸರಿಯಲ್ಲ. ದಾವ ಆಸ್ತಿಯ ವಿಸ್ತೀರ್ಣ 40 ಇಂಟು 60 ಎಂದರೆ ಸರಿಯಲ್ಲ. ದಾವ ಆಸ್ತಿಯು ಬಾವಿಕೆರೆ ಗ್ರಾಮದ ಸರ್ವೆ ನಂ.6 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ಸರ್ಕಾರದ ಆದೇಶದಂತೆ ವಾದಿಯು

ರೂಪಾಯಿ 2,000/- ವನ್ನು ಎಸ್ ಬಿ ಐ ಬ್ಯಾಂಕಿನ ಮುಖಾಂತರ ಸರ್ಕಾರಕ್ಕೆ ಜಮೆ ಮಾಡಿದ್ದಾರೆಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ನನಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದೆ ಬಾವಿಕೆರೆಯಲ್ಲಿ ವಾಸವಾಗಿದ್ದೇನೆಂದು ತೋರಿಸಲೂ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಬಾವಿಕೆರೆಯಲ್ಲಿ ಯಾವತ್ತೂ ವಾಸವಾಗಿರದ ಕಾರಣ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಭದ್ರಾವತಿ ತಾಲ್ಲೂಕಿನ ಹುಣಸಘಟ್ಟೆ ಗ್ರಾಮದಲ್ಲಿ ತಮಗೆ ಒಂದು ನಿವೇಶನ ಮಂಜೂರಾಗಿದೆ ಎಂದರೆ ಸರಿ. ನಾನು ಮಂಗಳೂರು ತಾಲ್ಲೂಕಿನ ಕಿನ್ನಿಗೊಳಿ ಗ್ರಾಮದಲ್ಲಿ ತಾವು ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ನಾನು ಅಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಮತದಾರರ ಚೀಟಿ ಸಹ ಕಿನ್ನಿಗೊಳಿ ಗ್ರಾಮದಲ್ಲಿ ಇದೆ ಎಂದರೆ ಸರಿ. ಸದರಿ ಮತದಾರರ ಚೀಟಿಯಲ್ಲಿ ಜಾರ್ಜ ಸನ್ನಿ ರೊಕಿ ಎಂದು ನಮೂದು ಮಾಡಿದ್ದಾರೆಂದರೆ ಸರಿ. ತಾವು ಬಾವಿಕೆರೆ ನಿವಾಸಿ ಅಲ್ಲ ತಮಗೆ ಯಾವುದೇ ರೀತಿಯ ಸರ್ಕಾರದಿಂದ ನಿವೇಶನ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿ ಸಂಪೂರ್ಣವಾಗಿ ವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.